# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 863
2. ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 23-02-2023
4. ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಹೆಣ್ಣೂರು ಕ್ರಾಸ್ ಬಳಿ ಮೆಟ್ರೋ ಪಿಲ್ಲರ್ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಉರುಳಿ ಬಿದ್ದ ಪರಿಣಾಮ ಓರ್ವ ಮಹಿಳೆ ಮತ್ತು ಮಗು ಮೃತ ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಅವಘಡಕ್ಕೆ ಕಾರಣಗಳೇನು; ಈ ಕುರಿತು ತನಿಖೆ ನಡೆಸಲಾಗಿದೆಯೇ; ತನಿಖೆ ನಡೆದಿದ್ದಲ್ಲಿ, ಈ ದುರ್ಘಟನೆ ಸಂಭವಿಸಲು ಕಾರಣಗಳನ್ನು ಪತ್ತೆ ಹಚ್ಚಲಾಗಿದೆಯೇ; ಈ ದುರ್ಘಟನೆಗೆ ಕಾರಣರಾದವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಬಂದಿದೆ.<br>ಈ ಘಟನೆಗೆ ಸಂಬಂಧಿಸಿದಂತೆ, ಸಿವಿಲ್ ಎಂಜಿನಿಯರಿಂಗ್ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು (IISc) ಇವರು ಘಟನೆಯ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ. ತನಿಖಾ ವರದಿ ಪ್ರಕಾರ ದುರ್ಘಟನೆಗೆ ಕಬ್ಬಿಣದ ಕಂಬಕ್ಕೆ ಸಮರ್ಪಕ ಸಪ್ಪೋರ್ಟ್ ಇಲ್ಲದಿರುವುದು ಮತ್ತು ತಾತ್ಕಾಲಿಕ ಸ್ಕ್ಯಾಫೋಲ್ಡಿಂಗನ್ನು ತೆಗೆದು ಹಾಕುವಾಗ ಕ್ರೇನ್ ಸಪ್ಪೋರ್ಟ್ ಇಲ್ಲದಿರುವುದು ಎಂದು ತಿಳಿದಿದೆ.<br>ಈ ದುರ್ಘಟನೆಗೆ ಸಂಬಂಧಪಟ್ಟಂತೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಬಿ.ಎಂ.ಆರ್.ಸಿ.ಎಲ್‌ನ ಮೂವರು ಅಭಿಯಂತರರನ್ನು ಅಮಾನತ್ತುಗೊಳಿಸಲಾಗಿದೆ.<br>2. ಗುತ್ತಿಗೆದಾರರ ಮೇಲೆ ರೂ.15,00,000/- ದಂಡ ವಿಧಿಸಲಾಗಿದೆ.<br>3. ಮೆಟ್ರೋ ನಿಗಮದ ಆದೇಶದನ್ವಯ ಗುತ್ತಿಗೆದಾರರು ಮೂರು ಜನ ಸಿಬ್ಬಂದಿಯನ್ನು ವಜಾಗೊಳಿಸಿರುತ್ತಾರೆ.<br>4. ಗುತ್ತಿಗೆದಾರರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ. |
| ಆ) | ಬೆಂಗಳೂರಿನಲ್ಲಿ ನಡೆಯುತ್ತಿರುವ ಮೆಟ್ರೋ ಕಾಮಗಾರಿಗಳ ಲೋಪಗಳಿಂದ ಇಲ್ಲಿಯವರೆಗೆ ಸಂಭವಿಸಿರುವ ಅವಘಡಗಳು ಎಷ್ಟು; ಈ ಅವಘಡಗಳಿಂದ ಉಂಟಾಗಿರುವ ಸಾವು-ನೋವುಗಳ ಸಂಖ್ಯೆ ಎಷ್ಟು; ಈ ಅವಘಡಗಳ ಕುರಿತು ತನಿಖೆ ನಡೆಸಲಾಗಿದೆಯೇ; ತನಿಖೆ ನಡೆದಿದ್ದಲ್ಲಿ, ಈ ಅವಘಡಗಳು ಸಂಭವಿಸಲು ಕಾರಣಗಳನ್ನು ಪತ್ತೆ ಹಚ್ಚಲಾಗಿದೆಯೇ; ಈ ಅವಘಡಗಳಿಗೆ ಕಾರಣರಾದವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಬೆಂಗಳೂರಿನಲ್ಲಿ ನಡೆಯುತ್ತಿರುವ ಮೆಟ್ರೋ ಕಾಮಗಾರಿ ದುರಂತದಲ್ಲಿ ಇಲ್ಲಿಯವರೆಗೂ 50 ಮಂದಿ ಅಪಘಾತಕ್ಕೆ ಒಳಪಟ್ಟಿರುತ್ತಾರೆ. ಇದರಲ್ಲಿ 38 ಮಂದಿ ಸಾವಿಗೀಡಾಗಿರುತ್ತಾರೆ. ದಿನಾಂಕ:10.01.2023 ರಂದು ನಡೆದ ಘಟನೆಯಲ್ಲಿ ಓರ್ವ ಮಹಿಳೆ ಮತ್ತು ಮಗು ಮೃತಪಟ್ಟಿರುವುದು ಹೊರತುಪಡಿಸಿ, ಇನ್ನುಳಿದ ಎಲ್ಲಾ ಘಟನೆಗಳು ಗುತ್ತಿಗೆದಾರರು ನೇಮಿಸಿಕೊಂಡ ಕಾರ್ಮಿಕರು, ಹೆಲ್ಪರ್‌ಗಳು, ಫಿಟ್ಟರ್‌ಗಳು, ಚಾಲಕರು, ರಿಗ್ಗರ್‌ಗಳು ಮತ್ತು ಕೌಶಲ್ಯ ರಹಿತ ಕಾರ್ಮಿಕರಿಗೆ ಆಕಸ್ಮಿಕವಾಗಿ ಅಪಘಾತಗಳು ಸಂಭವಿಸಿರುತ್ತದೆ. ಸದರಿ ಅಪಘಾತಗಳು ಸಂಭವಿಸಿದಾಗ ಇಲಾಖೆಯ ಹಿರಿಯ ಅಧಿಕಾರಿಗಳಿಂದ ತನಿಖೆ ನಡೆಸಲಾಗುತ್ತದೆ. ದಿನಾಂಕ:10.01.2023 ರಂದು ನಡೆದ ಘಟನೆಯಲ್ಲಿ ತಾಯಿ ಮತ್ತು ಮಗು ಸಾವನ್ನಪ್ಪಿರುವ ಬಗ್ಗೆ ಸಿವಿಲ್ ಇಂಜಿನಿಯರಿಂಗ್ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು (IISc) ಇವರು ಘಟನೆಯ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | ಮೇಲಿನ ಅವಘಡ ಸಂಭವಿಸಲು ಕಾರಣವನ್ನು ಪತ್ತೆ ಹಚ್ಚಿದ ನಂತರ ಬಿ.ಎಂ.ಆರ್.ಸಿ.ಎಲ್‌ನ ಮೂವರು ಅಭಿಯಂತರರನ್ನು ಅಮಾನತ್ತುಗೊಳಿಸಲಾಗಿದೆ.<br>ಕಾರ್ಮಿಕ ಕಾಯ್ದೆ ಅಡಿಯಲ್ಲಿ ನ್ಯಾಯಾಲಯಗಳ ಆದೇಶದ ಮೇರೆಗೆ ಗುತ್ತಿಗೆದಾರರು ರೂ.3,15,74,389/- ಗಳನ್ನು ಪರಿಹಾರ ಧನವನ್ನು ಅಪಘಾತಕ್ಕೀಡಾದ ಸಂಬಂಧಿಗಳಿಗೆ ಪಾವತಿಸಿರುತ್ತಾರೆ ಹಾಗೂ ಇದುವರೆಗೆ ಬೆಂಗಳೂರು ಮೆಟ್ರೋ ರೈಲು ನಿಗಮವು ಗುತ್ತಿಗೆದಾರರಿಗೆ ರೂ.1,77,00,000 ದಂಡ ವಿಧಿಸಿರುತ್ತದೆ. |

ಕಡತ ಸಂಖ್ಯೆ: ನಅಇ 38 ಪಿ.ಆರ್.ಜೆ 2023

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ